ಮಣಿಯದೇ, ಯಾವುದೇ ಸಾಮಾಜಿಕ ಪೂರ್ವಗ್ರಹದ ಪ್ರಭಾವಕ್ಕೆ ಶರಣಾಗದೇ, ಕಥಾನಿರೂಪಣೆಯಲ್ಲಿ ಸ್ವಂತಿಕೆಯನ್ನು ಅವರು ಕಾಪಿಟ್ಟುಕೊಂಡಿದ್ದಾರೆ. ಅವರ ಕಥೆಗಳಲ್ಲಿ ಬರುವ ಅನೇಕ ಘಟನೆಗಳು ನಿರೂಪಣೆಗೊಂದು ಹೊರೆಯಾಗಿ ಭಾಸವಾಗುವುದಿಲ್ಲ. ಅಥವಾ ನಿರೂಪಣೆಯ ಭಾರದಲ್ಲಿ ಅವು ಓದುಗನ ಕಣ್ಣಿನಿಂದ ಮರೆಯಾಗಿ ನಿಲ್ಲುವುದಿಲ್ಲ. ತಮ್ಮ ಕಥಾಹೆಣಿಗೆಯ ಕೌಶಲದ ಬಗ್ಗೆ ಅವರು ಬಹಳ ಎಚ್ಚರಿಕೆ ವಹಿಸುತ್ತಾರಾದರೂ, ಕೇವಲ ಹೆಣಿಗೆಯ ಕ್ರಮಕ್ಕೇ ಆದ್ಯತೆ ಕೊಡುವುದಿಲ್ಲ. ನಮ್ಮ ಸಮಾಜದಲ್ಲಿರುವ ಅಸಮಾನತೆಯ ಜೀವನ, ಬದುಕಿನಲ್ಲಿ ಎದುರಾಗುವ ನೋವು, ಅಲ್ಲಿ ಕಾಡುವ ಏಕಾಂಗಿತನ ಮುಂತಾದವುಗಳ ಆಳವಾದ ಅರಿವು ಅವರ ಕಥೆಗಳ ನಿರೂಪಣಾ ಶೈಲಿಯೊಡನೆ ಮಿಳಿತಗೊಂಡಿದೆ. ಕಥೆಗಳಲ್ಲಿರುವ ಸೂಕ್ಷ್ಮ ಸಂವೇದನೆ, ಕೋಮಲವಾದ ಭಾವನೆಗಳು, ಪಾತ್ರಗಳ ಮನೋವೈಜ್ಞಾನಿಕ ಲೋಕದಲ್ಲಿ ಅಚ್ಚೊತ್ತಿದ ರೀತಿಯಲ್ಲಿ ಪ್ರಕಟಗೊಂಡು, ಬಿಗುವಾದ ನಿರೂಪಣೆಯ ಕಥೆಗಳು ಸಹೃದಯರನ್ನು ಚಿಂತನೆಗೆ ಹಚ್ಚುವಂತಿವೆ.

ಅವಕಾಶ ವಂಚಿತ ಲೋಕದಲ್ಲಿರುವ ಅಸಮಾನ ಬದುಕನ್ನು ಹತ್ತಿರದಿಂದ ಕಂಡವರು ಹಿಮಾಂಶಿ. ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿರುವ ಮಕ್ಕಳು, ಕೊಳೆಗೇರಿಯಲ್ಲಿ, ರಿಮಾಂಡ್ ಹೋಮ್‌ಗಳಲ್ಲಿ ಮತ್ತು ಅನಾಥಾಲಯಗಳಲ್ಲಿರುವ ಮಕ್ಕಳ ಜೊತೆಗೆ ಅವರು ಒಡನಾಡಿದ್ದಾರೆ. ಅವರ ಏಳ್ಗೆಗಾಗಿ ಸ್ವತಂತ್ರವಾಗಿ ಕೆಲಸ ಮಾಡಿದ್ದಾರೆ. ಸೂರತ್‌ನಲ್ಲಿನ ಲೈಂಗಿಕ ಕಾರ್ಯಕರ್ತೆಯರ ಬದುಕನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೀಗೆ ವಾಸ್ತವತೆಗೆ ತೆರೆದ ಕಣ್ಣುಕಿವಿಗಳೊಂದಿಗೆ ಮುಖಾಮುಖಿಯಾಗುವ ಲೇಖಕಿ ಅವರು. ಶ್ರೀಮಂತ ಜೀವನಾನುಭವದ ಭಂಡಾರ ಮತ್ತು ಆ ಕುರಿತು ಅವರ ಅಂತರಂಗದಲ್ಲಿರುವ ಬೇನೆ ಬೇಸರಗಳು ಅವರ ಎಲ್ಲ ಕಥೆಗಳ ನಿರೂಪಣೆಯಲ್ಲಿ ಕಾಣಿಸುತ್ತವೆ.

ಸಮಾಜದಲ್ಲಿ ಹುಚ್ಚೆದ್ದು ಕುಣಿಯುವ ಗುಂಪಿನ ನಡುವೆ ಇರುವ ಅಸಹಾಯಕ ಶ್ರೀಸಾಮಾನ್ಯನೊಬ್ಬನ ವ್ಯರ್ಥ ಸಿಟ್ಟು, ಹೆಚ್ಚುತ್ತಿರುವ ಕೋಮವಾದದ ಆತಂಕ, ರಾಜಕೀಯ ಒತ್ತಡದ ನಡುವೆ ಅಸಹಾಯಕರಾಗಿ ನಿಲ್ಲುವ ಸಾಮಾನ್ಯರಿಗೆ ಹಿಮಾಂಶಿ ಬೆನ್ ಧ್ವನಿಯಾಗಿ ನಿಲ್ಲುತ್ತಾರೆ. ರಾಜಕೀಯ ಮತ್ತು ಸಾಮಾಜಿಕ ತುರ್ತಿನ ನಡುವೆ ಏಳುವ ಪ್ರಶ್ನೆಗಳನ್ನು ತಮ್ಮ ಕಥೆಗಳ ಮೂಲಕವೇ ನಿಭಾಯಿಸುತ್ತ ಅವರು ವ್ಯಕ್ತಪಡಿಸುವ ಆತಂಕ, ಕಳವಳದ ಧ್ವನಿಯು ಆರಾಮಕುರ್ಚಿಯಲ್ಲಿ ಕುಳಿತು ಕೇಳುವ ಒಣ ಪ್ರಶ್ನೆಗಳಲ್ಲ. ಕಥೆಗಳ ಮೂಲಕ ಅವರು ಯಾವ ಮೌಲ್ಯಗಳಿಗೆ ರೂಪುಕೊಡಲು ಪ್ರಯತ್ನಿಸುತ್ತಾರೋ, ಅಂತಹ ಸಮಸ್ಯೆಗಳು ಮತ್ತು ಮೌಲ್ಯಗಳ ಜೊತೆಗೆ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಕಥೆಗಳಲ್ಲಿ ಮಹಿಳೆಯನ್ನು ಅವರು ಎಷ್ಟೊಂದು ಬಣ್ಣಗಳೊಂದಿಗೆ ಚಿತ್ರಿಸುತ್ತಾರೆ! ಅಥವಾ ಎಷ್ಟೊಂದು ಆಯಾಮಗಳನ್ನು ಅನ್ವೇಷಿಸುವ ಪ್ರಯತ್ನ ಮಾಡುತ್ತಾರೆ! ಹೀಗೆ ಮಹಿಳೆಯ ಅಂತರಂಗದ ಹಲವು ಆಯಾಮಗಳನ್ನು ಮತ್ತು ಏಕಾಂಗಿನತನವನ್ನು ಅವರು ಚಿತ್ರಿಸುವ ರೀತಿ ಬೆರಗು ಹುಟ್ಟಿಸುವಂತಿದೆ.

ಕಷ್ಟಸಹಿಷ್ಣುತೆಯ ಸಾಮರ್ಥ್ಯ, ರಾಜಿ ಮಾಡಿಕೊಳ್ಳುವ ಅಥವಾ ಹೊಂದಾಣಿಕೆಯ ಸಾಮರ್ಥ್ಯ, ಬಿಟ್ಟುಬಿಡುವ ಗುಣ, ಸಹಿಸಿಕೊಳ್ಳುವುದು ಮತ್ತು ಪ್ರೀತಿಸುವುದು - ಹೀಗೆ ಮಹಿಳೆಯ ಅಂತರಂಗದ ಸಾಮರ್ಥ್ಯ ಮತ್ತು ಆಕೆಯ ಸಕಾರಾತ್ಮಕ ಅಂಶಗಳನ್ನು ಲೇಖಕಿಯು ಎಸಳುಎಸಳಾಗಿ ಕಥೆಗಳಲ್ಲಿ ನಿರೂಪಿಸುತ್ತಾರೆ. ಮಹಿಳೆಯ ಋಣಾತ್ಮಕ ಆಯಾಮಗಳನ್ನೂ ಪ್ರಸ್ತುತಪಡಿಸಲೂ ಅವರು ಹಿಂಜರಿದಿಲ್ಲ.

ಹಿಮಾಂಶಿ ಶೆಲತ್ ಅವರ ಕಥೆಗಳಲ್ಲಿ ಮದುವೆಯ ಹೊರಗಿನ ಸಂಬಂಧಗಳು ಕೊಡುವ ನೋವು ಮತ್ತು ಸಂಕೀರ್ಣತೆಯ ಬಹು ಆಯಾಮಗಳನ್ನು ಗುರುತಿಸಬಹುದು. ನಮ್ಮ ಸಮಾಜದಲ್ಲಿ ಹೆಚ್ಚು ದೀರ್ಘ ಭವಿಷ್ಯವಿಲ್ಲದ ಸಂಬಂಧವೊಂದನ್ನು ನಿರ್ವಹಿಸುವುದಕ್ಕಾಗಿ ಮಹಿಳೆಯೊಬ್ಬಳು ತನ್ನ ಎಲ್ಲವನ್ನೂ ಪಣಕ್ಕಿಡಬೇಕಾದ ಅಪಾಯ ಎದುರಿಸುತ್ತಾಳೆ. ಆದರೆ ಪುರುಷನು ವಿವಾಹ ಬಂಧನದೊಳಗೆ ಇದ್ದುಕೊಂಡೇ, ಯಾವಾಗೆಲ್ಲ ಸಮಯ, ಅವಕಾಶಗಳು ಲಭ್ಯವಾಗುತ್ತದೋ, ಆಗೆಲ್ಲ ಇನ್ನೊಂದು ಸಂಬಂಧಕ್ಕೆ ಇಂಬುಕೊಡುತ್ತಾ ಅದನ್ನು ನಿಭಾಯಿಸಿಕೊಂಡು ಆರಾಮವಾಗಿ ಇದ್ದುಬಿಡುತ್ತಾನೆ.